ಆರೋಪ – 5 :–

ಕಬ್ಬು ಬೆಳೆಗಾರರಿಗೆ ಸಕ್ಕರೆ ನಿಯಂತ್ರಣ ಕಾಯ್ದೆಯನ್ವಯ ಕಬ್ಬು ಸರಬರಾಜು ಮಾಡಿದ ಹಣವನ್ನು 14 ದಿನದೊಳಗೆ ಪಾವತಿ ಮಾಡಬೇಕಾಗಿದೆಯಾದರೂ 2007–08ನೇ ಹಂಗಾಮಿನ ಬಾಬ್ತು ರೂ.2099.59 ಲಕ್ಷ ಕಬ್ಬಿನ ಬಿಲ್ಲು ಪಾವತಿಸದೇ ಬಾಕಿ ಉಳಿಸಿಕೊಳ್ಳಲಾಗಿದೆ.

ಆರೋಪ – 6 :–

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29(ಜಿ) ರ ಪ್ರಕಾರ ಶ್ರೀ ಆರ್.ವಿ.ಮಧುಸೂಧನ್, ವ್ಯವಸ್ಥಾಪಕ ನಿರ್ದೇಶಕರು, ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಬೆಳಗಾಂ ಜಿಲ್ಲೆ ರವರು ಕರ್ತವ್ಯಗಳನ್ನು ನಿರ್ವಹಣೆ ಮಾಡಿರುವುದಿಲ್ಲ ಹಾಗೂ ವರದಿ ಮಾಡಿರುವ ಲೋಪದೋಷಗಳಿಗೆ ನೇರವಾಗಿ ಹೊಣೆಗಾರಗಾಗಿರುತ್ತಾರೆ. ಮುಖ್ಯವಾಗಿ ಅಂದಾಜು ರೂ.5055.50 ಲಕ್ಷದ ಮೊತ್ತಕ್ಕೆ ವಿವಿಧ ಬ್ಯಾಂಕುಗಳಲ್ಲಿ ಅಡಮಾನ ಮಾಡಿದ ಸಕ್ಕರೆ ದಾಸ್ತಾನು ಇರುವ ಬಗ್ಗೆ ತೀವ್ರ ಸಂಶಯ ಉಂಟಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

404 ಶ್ರೀ ರಘುಪತಿ ಭಟ್ ಕೆ.

ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಬಿಪಿಎಲ್ ಪಡಿತರ ಚೀಟಿ ವಿತರಣೆಯಲ್ಲಿ ನೆಮ್ಮದಿ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ವಿಳಂಬ ನೀತಿ ಹಾಗೂ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ

ಆ) ಹಾಗಿದ್ದಲ್ಲಿ, ಉಡುಪಿ ವಿಧಾನ ಸಭಾ ಕ್ಷೇತ್ರಕ್ಕೆ ವಿತರಿಸಲಾಗಿರುವ ಬಿಪಿಎಲ್ ಕಾರ್ಡುಗಳೆಷ್ಟು;

ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ವಿತರಿಸಲಾಗಿರುವ ಒಟ್ಟು -15,979 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಇ) ತದನಂತರ ಬಿಪಿಎಲ್ ಕಾರ್ಡುಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಅವರಿಗೆ ಯಾವಾಗ ಪಡಿತರ ಚೀಟಿ ವಿತರಿಸಲಾಗುವುದು;

ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೆಮ್ಮದಿ ಕೇಂದ್ರಗಳ ಮುಖಾಂತರ ಹೊಸದಾಗಿ ಪಡಿತರ ಚೀಟಿ ಕೋರಿ 2007 ಮತ್ತು ವರ್ಗ ಬದಲಾವಣೆ ಅರ್ಜಿಗಳು 1021 ಒಟ್ಟು 3028 ಅರ್ಜಿಗಳು ಸ್ವೀಕರಿಸಲಾಗಿದೆ. ಇವುಗಳ ಪೈಕಿ 950 ಬಿಪಿಎಲ್ ಮತ್ತು 1171 ಎಪಿಎಲ್ ಬಯೋಮೆಟ್ರಿಕ್ ಖಾಯಂ ಪಡಿತರ ಚೀಟಿಗಳನ್ನು ದಿ:26.2.2009ರಿಂದ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಳಿದ 907 ಅರ್ಜಿಗಳು ಪರಿಶೀಲನೆಯಲ್ಲಿ ತಿರಸ್ಕೃತಗೊಂಡಿದೆ. ಅವರಿಗೆ ಸೂಕ್ತ ಹಿಂಬರಹ ನೀಡಲಾಗುವುದು.

ಈ) ನಿಗದಿತ ಅವಧಿಯಲ್ಲಿ ಬಿಪಿಎಲ್ ಪಡಿತರ ಚೀಟಿಗೆ ಅರ್ಜಿ ನೀಡಲಾಗದವರಿಗೆ ಪುನಃ ಯಾವಾಗ ಅವಕಾಶ ನೀಡಲಾಗುವುದು?

ಈಗ ಬಂದಿರುವ ಅರ್ಜಿಗಳ ಪರಿಶೀಲನೆ ಮುಗಿದ ನಂತರ ತೀರ್ಮಾನಿಸಲಾಗುವುದು.

ಆನಾಸ 46 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

407 ಶ್ರೀ ಕೆ.ಪಿ.ಬಚ್ಚೇಗೌಡ (ಚಿಕ್ಕಬಳ್ಳಾಪುರ)

27.02.2009

ಅ) ರಾಜ್ಯದಲ್ಲಿ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು?(ಹೆಸರು ಮತ್ತು ವಿಳಾಸ ನೀಡುವುದು)

ರಾಜ್ಯದಲ್ಲಿ ದಿನಾಂಕ 31.03.2008ರ ಅಂತ್ಯಕ್ಕೆ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು 116 ಇರುತ್ತವೆ.

ಆ) ಆ ಪೈಕಿ ನಿಷ್ಕ್ರಿಯ ಸಹಕಾರ ಸಂಘಗಳೆಷ್ಟು ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು? ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು (ವಿವರ ನೀಡುವುದು)

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 03 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 108 ಇರುತ್ತವೆ.

ಸಂಘಗಳು ನಿಷ್ಕ್ರಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;

1. ಬೆಳೆಗೆ ಉತ್ತಮ ಬೆಲೆ ದೊರೆಯದ ಕಾರಣ ಸಾಲ ವಸೂಲಾತಿ ಕುಂಠಿತವಾಗಿರುತ್ತದೆ.
2. ಸಂಘಗಳಲ್ಲಿ ಕಾಲಕಾಲಕ್ಕೆ ನಡೆದಿರುವ ಹಣದುರುಪಯೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ
3. ಸಂಘಗಳ ವ್ಯವಹಾರದ ನಿರ್ವಹಣೆ ಸರಿಯಿಲ್ಲದ ಕಾರಣ

ಇ) ಕಳೆದ 3 ವರ್ಷಗಳಿಂದ ವರ್ಷವಾರು ಅಡಿಟ್ ಮಾಡಲಾಗಿರುವ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು (ವಿವರ ನೀಡುವುದು) ಇದೇ ಅವಧಿಯಲ್ಲಿ ರಾಜ್ಯ ಮಟ್ಟದ ಕಾರ್ಯ ವ್ಯಾಪ್ತಿಯಲ್ಲಿ, ಪುನರ್ ಆಡಿಟ್ ಮಾಡಲಾಗಿರುವ ಸಂಘಗಳೆಷ್ಟು (ವಿವರ ನೀಡುವುದು)